**ದಿ: 17-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: ಶ್ರೀ ಹೆಚ್ ಎಲ್ ಸಿ ವಕೀಲರಿಂದ:**

1. ನಾನು ಸಾಕ್ಷಿ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ ಅದರಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇದೆ. ಸಾಕ್ಷಿ ಪ್ರಮಾಣ ಪತ್ರವನ್ನು ವಕೀಲರು ಇಂಗ್ಲೀಷ್ ಬಾಷೆಯಲ್ಲಿ ಬರೆದಿರುತ್ತಾರೆ. ಅದರಲ್ಲಿ ಬರೆದಿರುವ ವಿಷಯಗಳನ್ನು ನಾನು ಮತ್ತು ನನ್ನ ತಂಗಿ ಹೇಳಿರುತ್ತೇವೆ. ವಾದಿ ನನ್ನ ತಂಗಿಯಾಗಿದ್ದು ಅವರ ಹೆಸರು ಪೂರ್ಣಿಮಾ ಅಂತಾ ಇರುತ್ತದೆ. ದಾವೆಯನ್ನು ನನ್ನ ತಂಗಿ ಪೂರ್ಣಿಮಾ ಇವರು ಮಾಡಿರುತ್ತಾರೆ. ಅವರು ಬೆಂಗಳೂರಿನಲ್ಲಿ 20 ವರ್ಷದಿಂದ ವಾಸ ಮಾಡಿಕೊಂಡಿದ್ದಾರೆ. ಅವರು ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ ಎಂದು ಸಾಮಾನ್ಯ ಮುಕ್ತಿಯಾರ ನಾಮೆಯನ್ನು ನನ್ನ ಅಣ್ಣ ಮಂಜುನಾಥರವರಿಗೆ ಬರೆದುಕೊಟ್ಟಿರುತ್ತಾರೆ. ಈ ದಾವೆಯನ್ನು 3 ಜನರ ವಿರುದ್ದ ಹೊಲ ಒತ್ತುವರಿಯಾಗಿದೆ ಎಂದು ಸಲ್ಲಿಸಿರುತ್ತಾರೆ. ಸುಮಾರು 3 ವರ್ಷದಿಂದ ದಾವೆ ಹೊಲವನ್ನು ಖರೀದಿ ಮಾಡಿರುತ್ತಾರೆ. ದಾವಾ ಹೊಲದ ಸ ನಂ 384/*/5, ವಿಸ್ತೀರ್ಣ 2-00 ಎಕರೆ ಇರುತ್ತದೆ. ದಾವಾ ಹೊಲವು ಮರಾಠಾ ಸೀಮಾದಲ್ಲಿ ಬರುತ್ತದೆ. ದಾವಾ ಹೊಲದಲ್ಲಿ ಪಕ್ಕದಲ್ಲಿ ಅದೇ ಸರ್ವೆ ನಂಬರ್ ನಲ್ಲಿ ಪ್ರತಿವಾದಿಯರಿಗೆ ಸೇರಿದ ಹೊಲ ಇರುತ್ತದೆ.

2. ದಾವಾ ಹೊಲವನ್ನು 2022 ನೇ ಇಸ್ವಿಯಲ್ಲಿ ಪೂರ್ಣಿಮಾ ರವರು ಖರೀದಿ ಮಾಡಿರುತ್ತಾರೆ. ಖರೀದಿ ಪತ್ರದ ನೋಂದಣಿ ಸಂಖ್ಯೆ ನನಗೆ ಗೊತ್ತಿಲ್ಲ. ಖರೀದಿ ಪತ್ರ ಆದ ಮೇಲೆ ಮುಟೇಶನ್ ನಂಬರ್ ನನಗೆ ಗೊತ್ತಿಲ್ಲ. ಶಹಾಬುದ್ದೀನ್ 1ನೇ ಪ್ರತಿವಾದಿ ದಾವಾ ಹೊಲದಲ್ಲಿ 40 ಗುಂಟೆ ಹೊಲ ಒತ್ತುವರಿ ಮಾಡಿರುತ್ತಾರೆ. ದಾವಾ ಹೊಲದ ಚಕ್ ಬಂದಿ ಉತ್ತರ ದಿಕ್ಕಿಗೆ ಶಹಾಬುದ್ದೀನ್ ಇವರ ಹೊಲ,

ದಕ್ಷಿಣಕ್ಕೆ ರಾಮನಗೌಡ ಇವರ ಹೊಲ ಇದೆ ಮತ್ತು ಪಶ್ಚಿಮಕ್ಕೆ ಬಾಲಗೌಡ ಇವರ ಹೊಲ, ಪೂರ್ವ ದಿಕ್ಕಿಗೆ ಅಂಬಣ್ಣ ಇವರ ಹೊಲ ಇರುತ್ತದೆ. ವಾದಿ ಈ ದಾವೆಯನ್ನು ನಮ್ಮ ಹೊಲ ನಮಗೆ ಬಿಟ್ಟುಕೊಡಿ ಎಂದು ಪರಿಹಾರ ಕೋರಿ ಸಲ್ಲಿಸಿರುತ್ತಾರೆ. ಖರೀದಿ ಮಾಡಿದಾಗಿನಿಂದ ಪ್ರತಿವಾದಿಯರು ದಾವಾ ಹೊಲವನ್ನು ಒತ್ತುವರಿ ಮಾಡಿರುತ್ತಾರೆ. 1ನೇ ಪ್ರತಿವಾದಿಯ ವಿಸ್ತೀರ್ಣ 2-00 ಎಕರೆ ಎಂದು ಹೇಳುತ್ತಾರೆ ಆದರೆ ನಿಖರವಾಗಿ ನನಗೆ ಗೊತ್ತಿಲ್ಲ. ದಾವಾ ಸರ್ವೆ ನಂಬರ್ ನಲ್ಲಿ ವಾದಿ ಇವರ ಮತ್ತು 1ನೇ ಪ್ರತಿವಾದಿ ಇವರ ಹೊಲ ಸೇರಿ ಒಂದೆ ಪಟ್ಟಿ ಇದೆ ಎಂದರೆ ಸಾಕ್ಷಿಯು ಇಲ್ಲ ಅಲ್ಲಿ ಬೌಂಡರಿ ಇದೆ ಎನ್ನುತ್ತಾರೆ. ನೀವು ಮೇಲೆ ಹೇಳಿದ ಚಕ್ ಬಂದಿ ಪ್ರಕಾರ ಅಲ್ಲಿ ಹೊಲ ಇರುವುದಿಲ್ಲ ಎಂದರೆ ಸರಿಯಲ್ಲ.

3. ವಾದಿ ಖರೀದಿ ಮಾಡುವ ಮೊದಲೇ 1ನೇ ಪ್ರತಿವಾದಿ ಅವರ ಒಂದೇ ಪಟ್ಟಿ ಹೊಲದಲ್ಲಿ ಕಬ್ಜಾದಲ್ಲಿದ್ದರು ಎಂದರೆ ಸರಿಯಲ್ಲ. ದಾವಾ ಹೊಲ ದ ಕಬ್ಜಾದಲ್ಲಿ 1ನೇ ಪ್ರತಿವಾದಿ ಇರುವುದನ್ನು ಗೊತ್ತಿದ್ದರೂ ಅದನ್ನು ಖರೀದಿ ಮಾಡಿದ್ದೀರಿ ಎಂದರೆ ಸರಿಯಲ್ಲ. ಸುಮಾರು 20-25 ವರ್ಷದಿಂದ 1ನೇ ಪ್ರತಿವಾದಿ ದಾವಾ ಹೊಲದ ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯರು 40 ಗುಂಟೆ ಜಮೀನು ಒತ್ತುವರಿ ಮಾಡಿದ್ದಾರೆ ಎಂದು ಹೇಳಿ ಬರೆಸಿದ್ದಿರಾ ಎಂದರೆ ಸಾಕ್ಷಿಯು ಬರೆಸಿಲ್ಲ ಎನ್ನುತ್ತಾರೆ. ಪ್ರತಿವಾದಿಯರು ದಾವಾ ಹೊಲವನ್ನು ಒತ್ತುವರಿ ಮಾಡಿರುವುದಿಲ್ಲ ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಗೆ ಖರೀದಿ ಪ್ರಕಾರ ಹೊಲ ಕಬ್ಜಾದಲ್ಲಿ ಇರುವುದಿಲ್ಲ ಎಂದು ಗೊತ್ತಿದ್ದರೂ ಅವರು ಬೇರೆಯವರ ಮುಖಾಂತರ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನೀವು ಸಾಕ್ಷಿ ಪ್ರಮಾಣ ಪತ್ರದ ವಿಷಯವನ್ನು ನೀವೆ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ಎಲ್ಲಾ ವಿಷಯಗಳು ಸುಳ್ಳಾಗಿವೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ